ಓ.ಎಸ್. ನಂಃ 92/2022
ಡಿ.ಡಬ್ಲ್ಯೂ-1 (ನಾಗರಾಜ)

ದಿನಾಂಕ: 13-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಎಸ್.ಬಿ.ಎನ್. ಪ್ರತಿವಾದಿ 1 ರಿಂದ 4 ರವರ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಸರ್ವೆ ನಂ.136 ರ 2021-22ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿಡಿ-1, ಸರ್ವೆ ನಂ.116 ರ 2021-22ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿಡಿ-2, ಸರ್ವೆ ನಂ.116/1 ರ 1997-98 ರಿಂದ 2001-02 ರವರೆಗಿನ ಪಹಣಿ ಪತ್ರಿಕೆಯನ್ನು ನಿಡಿ-3, ಸರ್ವೆ ನಂ.116/1 ರ 1990-91 ರಿಂದ 1996-97 ರವರೆಗಿನ ಪಹಣಿ ಪತ್ರಿಕೆಯನ್ನು ನಿಡಿ-4, ಎಂ.ಇ.ನಂ.1899 ಇದರ ಪ್ರತಿಯನ್ನು ನಿಡಿ-5, ಎಂ.ಇ.ನಂ.1971 ಇದರ ಪ್ರತಿಯನ್ನು ನಿಡಿ-6, ಸ್ವತ್ತು ಸಂಖ್ಯೆ-150400505000101898 ರ ನಮೂನೆ-11ಬಿ ನಿಡಿ-7, ವಿದ್ಯುತ್ ಬಿಲ್ಲು ಪಾವತಿ ಮಾಡಿದ ಸ್ಟೇಟ್ಮೆಂಟನ್ನು ನಿಡಿ-8, ಎರಡು ತೆರಿಗೆ ಪಾವತಿ ರಸೀದಿಗಳನ್ನು ನಿಡಿ-9, ಐದು ಫೋಟೋಗಳನ್ನು ಒಟ್ಟಾಗಿ ನಿಡಿ-10 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ